ತಬರ್ರುಕ್

ಬರಕತ್ ಪಡೆಯುವುದು

ಶೈಖ್ ಸಾಲಿಹ್ ಇಬ್ನ್ ಅಬ್ದುಲ್ ಅಝೀಝ್ ಆಲು ಶೈಖ್

مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ತಬರ್ರುಕ್ ಎಂಬ ಶಬ್ದವು ತಬರ್ರಕ–ಯತಬರ್ರಕು (تَبَرَّكَ-يَتَبَرَّكُ) ಎಂಬ ಕ್ರಿಯೆಯ ಧಾತುವಾಗಿದೆ. ಇದನ್ನು ಬರಕತ್ (بَرَكَةٌ) ಎಂಬ ಶಬ್ದದಿಂದ ಪಡೆಯಲಾಗಿದೆ.

ಖ್ಯಾತ ಭಾಷಾತಜ್ಞ ಅಬೂ ಮನ್ಸೂರ್ ತಮ್ಮ 'ತಹ್‌ಝೀಬುಲ್ಲುಗ' ಎಂಬ ಗ್ರಂಥದಲ್ಲಿ (10/231) 'ಬರಕತ್' ಎಂಬ ಶಬ್ದದ ಅರ್ಥವನ್ನು ವಿವರಿಸುತ್ತಾ ಹೇಳುತ್ತಾರೆ:

وَأَصْلُ الْبَرَكَةِ: الزِّيَادَةُ وَالنَّمَاءُ.

"ಬರಕತ್ ಎಂಬ ಶಬ್ದದ ಮೂಲ ಅರ್ಥ: ಹೆಚ್ಚಳ ಮತ್ತು ಅಭಿವೃದ್ಧಿ."

ಬರಕತ್ತನ್ನು ಆಶಿಸುವವನು ಯಾವ ವಸ್ತುವಿನಲ್ಲಿ ಬರಕತ್ ಸಿಗಬೇಕೆಂದು ಆಶಿಸುತ್ತಾನೋ ಆ ವಸ್ತುವಿನಲ್ಲಿ ಉಂಟಾಗಬೇಕೆಂದು ಆಶಿಸುವ ಹೆಚ್ಚಳ ಮತ್ತು ಅಭಿವೃದ್ಧಿಯನ್ನೇ ಬರಕತ್ ಎಂದು ಕರೆಯುವುದು. ಈ ಹೆಚ್ಚಳ ಮತ್ತು

ಅಭಿವೃದ್ಧಿಯು ಕೆಲವು ಸ್ಥಳಗಳಲ್ಲಿ, ಕೆಲವು ವ್ಯಕ್ತಿಗಳ ಸತ್ವಗಳಲ್ಲಿ ಮತ್ತು ಕೆಲವು ಗುಣವಿಶೇಷಣಗಳಲ್ಲಿ ಇರಬಹುದು. ಇದು ಬರಕತ್ ಎಂಬ ಶಬ್ದದ ಭಾಷಿಕ ಅರ್ಥವಾಗಿದೆ. ಇದರ ಪಾರಿಭಾಷಿಕ ಅಥವಾ ಶರಈ ಅರ್ಥವನ್ನು ಮುಂದೆ ವಿವರಿಸಲಾಗುವುದು. ಇನ್ ಶಾ ಅಲ್ಲಾಹ್.

ಬರಕತ್ ಕೆಲವು ಸ್ಥಳಗಳಲ್ಲಿ ಇರಬಹುದು ಎನ್ನುವುದಕ್ಕೆ ಉದಾಹರಣೆ ಅಲ್ಲಾಹನ ಈ ವಚನಗಳು:

﴿وَجَعَلَ فِيهَا رَوَاسِيَ مِن فَوْقِهَا وَبَارَكَ فِيهَا﴾

“ಅವನು ಅದರಲ್ಲಿ (ಭೂಮಿಯಲ್ಲಿ) –ಅದರ ಮೇಲ್ಭಾಗದಲ್ಲಿ– ಪರ್ವತಗಳನ್ನು ಸ್ಥಾಪಿಸಿದನು ಮತ್ತು ಅದರಲ್ಲಿ (ಭೂಮಿಯಲ್ಲಿ) ‘ಬರಕತ್ತನ್ನು’ ಇಟ್ಟನು.” [ಫುಸ್ಸಿಲತ್ 41:10]

﴿وَأَوْرَثْنَا ٱلْقَوْمَ ٱلَّذِينَ كَانُوا۟

يُسْتَضْعَفُونَ مَشَـٰرِقَ ٱلْأَرْضِ
وَمَغَـٰرِبَهَا ٱلَّتِي بَـٰرَكْنَا فِيهَا ﴾

“ನಾವು ‘ಬರಕತ್’ ನೀಡಿದ, ಭೂಮಿಯ ಪಶ್ಚಿಮ ಮತ್ತು ಪೂರ್ವ ಪ್ರದೇಶಗಳನ್ನು ಬಲಹೀನರಾದ ಆ ಜನತೆಗೆ ಉತ್ತರಾಧಿಕಾರವಾಗಿ ಕೊಟ್ಟೆವು.” [ಅಲ್ಅಅ್ರಾಫ್ 7:137]

﴿ لَفَتَحْنَا عَلَيْهِم بَرَكَـٰتٍ مِّنَ
ٱلسَّمَآءِ وَٱلْأَرْضِ ﴾

“ನಾವು ಅವರಿಗೆ ಆಕಾಶದಿಂದ ಮತ್ತು ಭೂಮಿಯಿಂದ ‘ಬರಕತ್’ಗಳನ್ನು ತೆರೆದುಕೊಡುತ್ತಿದ್ದೆವು.” [ಅಲ್ಅ-ಅ್ರಾಫ್ 7:96]

﴿ وَقُل رَّبِّ أَنزِلْنِي مُنزَلًا مُّبَارَكًا ﴾

“ಹೇಳಿರಿ: ಓ ನನ್ನ ರಬ್ಬೇ! ‘ಬರಕತ್’ ಇರುವಂತಹ ಒಂದು ಸ್ಥಳದಲ್ಲಿ ನನ್ನನ್ನು ಇಳಿಸು.” [ಅಲ್‌ಮುಅ್‌ಮಿನೂನ್ 23:29]

ಅಲ್ಲಾಹು ಕೆಲವು ಸ್ಥಳಗಳಿಗೆ ಬರಕತ್ ನೀಡಿದ್ದಾನೆ ಎನ್ನುವುದಕ್ಕೆ ಈ ಆಯತ್‌ಗಳು ಪುರಾವೆಯಾಗಿವೆ. ಇನ್ನು ಬರಕತ್ ಕೆಲವು ವ್ಯಕ್ತಿಗಳ ಸತ್ವಗಳಲ್ಲಿ ಇರಬಹುದು ಎನ್ನುವುದಕ್ಕೆ ಉದಾಹರಣೆ ಅಲ್ಲಾಹನ ಈ ವಚನಗಳು:

﴿ وَبَٰرَكۡنَا عَلَيۡهِ وَعَلَىٰٓ إِسۡحَٰقَۚ ﴾

“ನಾವು ಅವರಿಗೆ (ಇಬ್ರಾಹೀಮರಿಗೆ) ಮತ್ತು ಇಸ್‌ಹಾಕ್‌ರಿಗೆ ‘ಬರಕತ್’ ನೀಡಿದೆವು.” [ಅಸ್ಸಾಫ್ಫಾತ್ 37:113]

ಅಲ್ಲಾಹು ನೂಹ್(عليه السلام) ರ ಬಗ್ಗೆ ಹೇಳುತ್ತಾನೆ:

﴿ ٱهۡبِطۡ بِسَلَٰمٖ مِّنَّا وَبَرَكَٰتٍ عَلَيۡكَ
وَعَلَىٰٓ أُمَمٖ مِّمَّن مَّعَكَۚ ﴾

“ತಾವು ನಮ್ಮ ಕಡೆಯ ಸುರಕ್ಷೆಯೊಡನೆ ಮತ್ತು ತಮ್ಮ ಮೇಲೆ ಹಾಗೂ ತಮ್ಮೊಂದಿಗಿನ ಸಮುದಾಯಗಳಲ್ಲಿ ಕೆಲವರ ಮೇಲಿರುವ ‘ಬರಕತ್’ಗಳೊಡನೆ ಇಳಿಯಿರಿ.” [ಹೂದ್ 11:48]

ಅಂಬಿಯಾ ಮುರ್ಸಲ್‌ಗಳ ಸತ್ವಗಳಲ್ಲಿ ಅಲ್ಲಾಹು ಬರಕತ್ತನ್ನು ಇಟ್ಟಿದ್ದಾನೆ ಎನ್ನುವುದಕ್ಕೆ ಈ ಆಯತ್‌ಗಳು ಪುರಾವೆಯಾಗಿವೆ. ಈ ಬರಕತ್ ಅವರ ಸತ್ವದೊಂದಿಗೆ ಅಂಟಿಕೊಂಡಿರುವ, ಅವರನ್ನು ಬಿಟ್ಟುಹೋಗದ ಬರಕತ್ ಆಗಿದೆ. ಅದೇ ರೀತಿ ಬರಕತ್ ಕೆಲವು ಗುಣ ವಿಶೇಷಣಗಳಲ್ಲೂ ಇರಬಹುದು ಎಂಬುದಕ್ಕೆ ಉದಾಹರಣೆ ಅಲ್ಲಾಹನ ಈ ವಚನಗಳು:

﴿فَسَلِّمُوا۟ عَلَىٰٓ أَنفُسِكُمْ تَحِيَّةً مِّنْ عِندِ ٱللَّهِ مُبَـٰرَكَةً طَيِّبَةً﴾

“ನೀವು ನಿಮ್ಮ ಮೇಲೆಯೇ ಸಲಾಂ (ಅಭಿವಂದನೆ)

ಹೇಳಿರಿ; ಅಂದರೆ ‘ಬರಕತ್’ ಇರುವ ಮತ್ತು ಉತ್ತಮವಾಗಿರುವ ಅಲ್ಲಾಹನ ಕಡೆಯ ಅಭಿವಂದನೆ.” [ಅನ್ನೂರ್ 24:61]

﴿ وَهَٰذَا ذِكْرٌ مُّبَارَكٌ أَنزَلْنَٰهُ ۚ أَفَأَنتُمْ لَهُۥ مُنكِرُونَ ﴾ ٥٠

“ಇದೊಂದು ‘ಬರಕತ್’ ಇರುವ ಸ್ಮರಣೆ; ನಾವು ಅದನ್ನು ಅವತೀರ್ಣಗೊಳಿಸಿದೆವು. ಹೀಗಿದ್ದೂ ನೀವು ಅದನ್ನು ನಿಷೇಧಿಸುವಿರಾ?” [ಅಲ್‌ಅಂಬಿಯಾ 21:50]

ಅಲ್ಲಾಹನ ಗ್ರಂಥವನ್ನು ತದೇಕಚಿತ್ತದಿಂದ ಅಧ್ಯಯನ ಮಾಡಿದರೆ, ಈ ‘ಬರಕತ್’ ಎನ್ನುವುದು ಅಲ್ಲಾಹನ ಕಡೆಯಿಂದ ಮಾತ್ರ ಲಭ್ಯವಾಗುವಂತದ್ದು, ಅದನ್ನು ಅಲ್ಲಾಹನಲ್ಲಿ ಮಾತ್ರ ಬೇಡಬೇಕು ಮತ್ತು ಅವನದನ್ನು ಅವನ ಸೃಷ್ಟಿಗಳಲ್ಲಿ ಅವನಿಚ್ಛಿಸಿದವರಲ್ಲಿ ಹಾಗೂ ಅವನಿಚ್ಛಿಸಿದ ವಸ್ತುಗಳಲ್ಲಿ ಇಡುತ್ತಾನೆ ಎಂದು ಕುರ್‌ಆನ್

ಸ್ಪಷ್ಟಪಡಿಸಿರುವುದನ್ನು ಕಾಣಲು ಸಾಧ್ಯವಿದೆ. ಅಲ್ಲಾಹು ಹೇಳುತ್ತಾನೆ:

﴿أَلَا لَهُ ٱلْخَلْقُ وَٱلْأَمْرُ ۗ تَبَارَكَ ٱللَّهُ رَبُّ ٱلْعَٰلَمِينَ ﴿٥٤﴾﴾

“ಅರಿಯಿರಿ! ಸೃಷ್ಟಿ ಮತ್ತು ಆಜ್ಞೆ ಅಲ್ಲಾಹನಿಗೆ ಸೇರಿದ್ದು. ಸರ್ವಲೋಕಗಳ ರಬ್ಬ್ ಆಗಿರುವ ಅಲ್ಲಾಹು ‘ಬರಕತ್’ ಇರುವವನು.” [ಅಲ್‌ಅಅ್‌ರಾಫ್ 7:54]

﴿تَبَارَكَ ٱلَّذِى نَزَّلَ ٱلْفُرْقَانَ عَلَىٰ عَبْدِهِۦ﴾

“ಸತ್ಯಾಸತ್ಯ ವಿವೇಚನಾ ಗ್ರಂಥವನ್ನು ತನ್ನ ದಾಸನಿಗೆ ಅವತೀರ್ಣಗೊಳಿಸಿದ ಅಲ್ಲಾಹು ‘ಬರಕತ್’ ಇರುವವನು.” [ಅಲ್‌ಫುರ್ಕಾನ್ 25:1]

﴿تَبَارَكَ ٱلَّذِى جَعَلَ فِى ٱلسَّمَآءِ بُرُوجًا﴾

“ಆಕಾಶದಲ್ಲಿ ನಕ್ಷತ್ರಪುಂಜಗಳನ್ನು ಸ್ಥಾಪಿಸಿದ ಅಲ್ಲಾಹು ‘ಬರಕತ್’ ಇರುವವನು.” [ಅಲ್‌ಫುರ್ಕಾನ್ 25:61]

﴿فَتَبَارَكَ ٱللَّهُ أَحْسَنُ ٱلْخَٰلِقِينَ ١٤﴾

“ಅತ್ಯುತ್ತಮವಾಗಿ ಸೃಷ್ಟಿಸುವ ಅಲ್ಲಾಹು ‘ಬರಕತ್’ ಇರುವವನು.” [ಅಲ್‌ಮುಅ್‌ಮಿನೂನ್ 23:14]

﴿تَبَٰرَكَ ٱسْمُ رَبِّكَ ذِى ٱلْجَلَٰلِ وَٱلْإِكْرَامِ ٧٨﴾

“ಮಹಾಮಹಿಮನೂ ಗೌರವಪೂರ್ಣನೂ ಆಗಿರುವ ನಿನ್ನ ರಬ್ಬಿನ ಹೆಸರು ‘ಬರಕತ್’ ಇರುವಂತದ್ದು.” [ಅರ್‍ರ‍ಹ್ಮಾನ್ 55:78]

ತಬಾರಕ (ಬರಕತ್ ಇರುವವನು; ಬರಕತ್ ತುಂಬಿರುವವನು) ಎಂಬ ಶಬ್ದವನ್ನು ಇನ್ನೂ ಅನೇಕ ಆಯತ್‌ಗಳಲ್ಲಿ ಕಾಣಬಹುದು.

ಕುರ್‌ಆನಿನಲ್ಲಿ 'ತಬಾರಕ' ಎಂಬ ಶಬ್ದವನ್ನು ಅಲ್ಲಾಹ-ನಿಗಲ್ಲದೆ ಬೇರೆ ಯಾರಿಗೂ ಜೋಡಿಸಿ ಹೇಳಲಾಗಿಲ್ಲ. ಬರಕತ್ ಅಲ್ಲಾಹನಿಗೆ ಮಾತ್ರ ಸೇರಿದ್ದು, ಅದನ್ನು ಕೊ-ಡುವವನು ಅವನು ಮಾತ್ರ, ತನ್ನ ಸೃಷ್ಟಿಗಳ ಪೈಕಿ ಕೆಲವು ವರ್ಗಗಳಲ್ಲಿ ಅವನು ಬರಕತ್ ಇಟ್ಟಿದ್ದಾನೆಂದು ಅಲ್ಲಾಹು ನಮಗೆ ತಿಳಿಸಿದ್ದಾನೆ.

1. ಅಂಬಿಯಾ ಮುರ್ಸಲ್‌ಗಳಲ್ಲಿ ಅಲ್ಲಾಹು ಬರಕತ್ತನ್ನು ಇಟ್ಟಿದ್ದಾನೆ. ಅಲ್ಲಾಹು ಹೇಳುತ್ತಾನೆ:

﴿ وَبَـٰرَكۡنَا عَلَيۡهِ وَعَلَىٰٓ إِسۡحَـٰقَۚ ﴾

"ನಾವು ಅವರಿಗೆ (ಇಬ್ರಾಹೀಮರಿಗೆ) ಮತ್ತು ಇಸ್‌ಹಾ-ಕ್‌ರಿಗೆ 'ಬರಕತ್' ನೀಡಿದೆವು." [ಅಸ್ಸಾಫ್ಫಾತ್ 37:113]

ಇಬ್ರಾಹೀಂ(عليه السلام) ಮತ್ತು ಅವರ ಕುಟುಂಬದ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿ رَحْمَتُ ٱللَّهِ وَبَرَكَٰتُهُۥ عَلَيْكُمْ أَهْلَ ٱلْبَيْتِ ﴾

“ಓ ಮನೆಯವರೇ! ನಿಮ್ಮ ಮೇಲೆ ಅಲ್ಲಾಹನ ರಹ್ಮತ್ ಮತ್ತು ‘ಬರಕತ್’ಗಳು ಇರಲಿ.” [ಹೂದ್ 11:73]

ನೂಹ್(عليه السلام) ರ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿ ٱهْبِطْ بِسَلَٰمٍ مِّنَّا وَبَرَكَٰتٍ عَلَيْكَ
وَعَلَىٰٓ أُمَمٍ مِّمَّن مَّعَكَ ﴾

“ತಾವು ನಮ್ಮ ಕಡೆಯ ಸುರಕ್ಷೆಯೊಡನೆ ಮತ್ತು ತಮ್ಮ ಮೇಲೆ ಹಾಗೂ ತಮ್ಮೊಂದಿಗಿನ ಸಮುದಾಯಗಳಲ್ಲಿ ಕೆಲವರ ಮೇಲಿರುವ ‘ಬರಕತ್’ಗಳೊಡನೆ ಇಳಿಯಿರಿ.” [ಹೂದ್ 11:48]

ಈಸಾ(عليه السلام) ಹೇಳುತ್ತಾರೆ:

﴿ وَجَعَلَنِى مُبَارَكًا أَيْنَ مَا كُنتُ ﴾

“ನಾನು ಎಲ್ಲೇ ಇದ್ದರೂ ಅವನು ನನ್ನನ್ನು ‘ಬರಕತ್’ ಇರುವವನಾಗಿ ಮಾಡಿದ್ದಾನೆ.” [ಮರ್ಯಮ್ 19:31]

2. ಕೆಲವು ಆರಾಧನಾ ಸ್ಥಳಗಳಲ್ಲಿ ಅಲ್ಲಾಹು ಬರಕತ್ತನ್ನು ಇಟ್ಟಿದ್ದಾನೆ. ಉದಾ: ಅಲ್‌ಮಸ್ಜಿದುಲ್ ಅಕ್ಸಾ, ಅಲ್‌ಮಸ್ಜಿದುಲ್ ಹರಾಂ ಇತ್ಯಾದಿ. ಅಲ್ಲಾಹು ಹೇಳುತ್ತಾನೆ:

﴿سُبْحَٰنَ ٱلَّذِىٓ أَسْرَىٰ بِعَبْدِهِۦ لَيْلًا
مِّنَ ٱلْمَسْجِدِ ٱلْحَرَامِ إِلَى ٱلْمَسْجِدِ
ٱلْأَقْصَا ٱلَّذِى بَٰرَكْنَا حَوْلَهُۥ﴾

“ಅಲ್‌ಮಸ್ಜಿದುಲ್ ಹರಾಂನಿಂದ, ನಾವು ಸುತ್ತಲೂ ‘ಬರಕತ್’ ನೀಡಿದ ಅಲ್‌ಮಸ್ಜಿದುಲ್ ಅಕ್ಸಾಗೆ ರಾತ್ರಿಯಲ್ಲಿ ತನ್ನ ದಾಸನನ್ನು ನಿಶಾಪ್ರಯಾಣ ಮಾಡಿಸಿದವನು ಸರ್ವ ನ್ಯೂನತೆಗಳಿಂದಲೂ ಪರಿಶುದ್ಧನು.” [ಅಲ್‌ಇಸ್ರಾ 17:1]

﴿إِنَّ أَوَّلَ بَيْتٍ وُضِعَ لِلنَّاسِ

﴿ لَلَّذِي بِبَكَّةَ مُبَارَكًا ﴾

"ಖಂಡಿತವಾಗಿಯೂ ಮನುಷ್ಯರಿಗಾಗಿ ಮೊಟ್ಟಮೊದಲು ನಿರ್ಮಾಣಗೊಂಡ ಭವನವು ಮಕ್ಕಾದಲ್ಲಿರುವಂತದ್ದು. ಅದನ್ನು 'ಬರಕತ್' ಇರುವುದನ್ನಾಗಿ ಮಾಡಲಾಗಿದೆ." [ಆಲು ಇಮ್ರಾನ್ 3:96]

3. ಅಲ್ಲಾಹು ಅವತೀರ್ಣಗೊಳಿಸಿದ ಸ್ಮರಣೆಯಲ್ಲಿ ಅವನು ಬರಕತ್ತನ್ನು ಇಟ್ಟಿದ್ದಾನೆ. ಅಲ್ಲಾಹು ಹೇಳುತ್ತಾನೆ:

﴿ وَهَٰذَا ذِكْرٌ مُّبَارَكٌ أَنزَلْنَٰهُ
أَفَأَنتُمْ لَهُۥ مُنكِرُونَ ﴿٥٠﴾ ﴾

"ಇದೊಂದು 'ಬರಕತ್' ಇರುವ ಸ್ಮರಣೆ; ನಾವು ಅದನ್ನು ಅವತೀರ್ಣಗೊಳಿಸಿದೆವು. ಹೀಗಿದ್ದೂ ನೀವು ಅದನ್ನು ನಿ-ಷೇಧಿಸುವಿರಾ?" [ಅಲ್‌ಅಂಬಿಯಾ 21:50] ಇಲ್ಲಿ ಸ್ಮರಣೆ ಎಂದರೆ ಕುರ್‌ಆನ್.

﴿وَهَٰذَا كِتَٰبٌ أَنزَلْنَٰهُ مُبَارَكٌ﴾

“ಇದು ‘ಬರಕತ್’ ಇರುವ ಗ್ರಂಥ. ನಾವು ಅದನ್ನು ಅವತೀರ್ಣಗೊಳಿಸಿದೆವು.” [ಅಲ್‌ಅನ್‌ಆಮ್ 6:92]

﴿كِتَٰبٌ أَنزَلْنَٰهُ إِلَيْكَ مُبَٰرَكٌ لِّيَدَّبَّرُوٓا۟ ءَايَٰتِهِۦ وَلِيَتَذَكَّرَ أُو۟لُوا۟ ٱلْأَلْبَٰبِ ٢٩﴾

“ಇದು ‘ಬರಕತ್’ ಇರುವ ಗ್ರಂಥ. ನಾವು ಅದನ್ನು ತಮಗೆ ಅವತೀರ್ಣಗೊಳಿಸಿದೆವು. ಅದರಲ್ಲಿರುವ ದೃಷ್ಟಾಂತಗಳ ಬಗ್ಗೆ ಅವರು ಅಧ್ಯಯನ ಮಾಡಲು ಮತ್ತು ಬುದ್ಧಿವಂತರು ಅದರಿಂದ ಜ್ಞಾಪಿತರಾಗಲು.” [ಸ್ವಾದ್ 38:29]

ಕುರ್‌ಆನ್ ಬರಕತ್ ಇರುವ ಸ್ಮರಣೆಯಾಗಿದೆ. ಅದರ ಆಯತ್‌ಗಳನ್ನು ಅಧ್ಯಯನ ಮಾಡುವುದರಿಂದ ಬರಕತ್ ಸಿಗುತ್ತದೆ. ಕುರ್‌ಆನಿಗೆ ಸಂಬಂಧಿಸಿದ ಜ್ಞಾನಗಳೆಲ್ಲವೂ ಈ ಅಧ್ಯಯನದಲ್ಲಿ ಒಳಗೊಳ್ಳುತ್ತವೆ. ಸುನ್ನತ್

ಕುರ್‌ಆನಿನ ವಿಶದೀಕರಣವಾಗಿರುವುದರಿಂದ ಅದೂ ಕೂಡ ಬರಕತ್ ಇರುವಂತದ್ದು. ಕುರ್‌ಆನ್ ಮತ್ತು ಸುನ್ನತ್ತನ್ನು ಅನುಸರಿಸುವುದರಿಂದ ಬರಕತ್ ಲಭ್ಯವಾಗುತ್ತದೆ. ಕುರ್‌ಆನ್ ಆಯತ್‌ಗಳನ್ನು ಅಧ್ಯಯನ ಮಾಡುವ ಮೂಲಕ ಮತ್ತು ಸುನ್ನತ್ತನ್ನು ಅಧ್ಯಯನ ಮಾಡುವ ಮೂಲಕ ಉದ್ಭವವಾಗುವ ಜ್ಞಾನಗಳೆಲ್ಲವೂ ಬರಕತ್ ಇರುವ ಜ್ಞಾನಗಳು.

ಮೇಲೆ ವಿವರಿಸಿದ ಮೂರು ವಿಧಗಳಲ್ಲಿರುವ ಬರಕತ್ ವಿಶೇಷ ಬರಕತ್ ಆಗಿದ್ದು ಕುರ್‌ಆನ್‌ನಲ್ಲಿ ಇವುಗಳ ಪ್ರಸ್ತಾಪ ಬಂದಿದೆ. ಈ ವಿಶೇಷ ಬರಕತ್ ಅಲ್ಲದ ಇನ್ನೊಂದು ಸಾಮಾನ್ಯ ಬರಕತ್ ಇದೆ. ಅದು ಕೂಡ ಕೆಲವು ವಿಧಗಳನ್ನು ಹೊಂದಿದೆ. ಉದಾಹರಣೆಗೆ,

1. ಮಳೆನೀರು ಬರಕತ್ ಇರುವಂತದ್ದು. ಕಾರಣ ಅದರ ಮೂಲಕ ಜನರ ಉಪಜೀವನದಲ್ಲಿ ಮತ್ತು ಕೃಷಿಯಲ್ಲಿ ಹೆಚ್ಚಳ ಹಾಗೂ ಅಭಿವೃದ್ಧಿಯುಂಟಾಗುತ್ತದೆ. ಅಲ್ಲಾಹು

ಹೇಳುತ್ತಾನೆ:

﴿ وَنَزَّلْنَا مِنَ ٱلسَّمَآءِ مَآءً مُّبَـٰرَكًا فَأَنۢبَتْنَا بِهِۦ جَنَّـٰتٍ وَحَبَّ ٱلْحَصِيدِ ﴿٩﴾ ﴾

“ನಾವು ಆಕಾಶದಿಂದ ‘ಬರಕತ್’ ಇರುವ ಮಳೆಯನ್ನು ಸುರಿಸಿದೆವು. ನಂತರ ಅದರ ಮೂಲಕ ತೋಟಗಳ-ನ್ನು ಮತ್ತು ಕಟಾವಿನ ಧಾನ್ಯಗಳನ್ನು ಉತ್ಪಾದಿಸಿದೆವು.” [ಕ್ವಾಫ್ 50:9]

2. ಭೂಮಿಗೆ ಅಲ್ಲಾಹು ಬರಕತ್ ನೀಡಿದ್ದಾನೆ. ಕಾರಣ ಅಲ್ಲಾಹು ಹೇಳುತ್ತಾನೆ:

﴿ وَجَعَلَ فِيهَا رَوَٰسِىَ مِن فَوْقِهَا وَبَـٰرَكَ فِيهَا ﴾

“ಅವನು ಅದರಲ್ಲಿ (ಭೂಮಿಯಲ್ಲಿ) –ಅದರ ಮೇಲ್ಭಾ-ಗದಲ್ಲಿ– ಪರ್ವತಗಳನ್ನು ಸ್ಥಾಪಿಸಿದನು ಮತ್ತು ಅದರಲ್ಲಿ (ಭೂಮಿಯಲ್ಲಿ) ‘ಬರಕತ್ತನ್ನು’ ಇಟ್ಟನು.” [ಫುಸ್ಸಿಲತ್

41:10]

﴿مَشَـٰرِقَ ٱلْأَرْضِ وَمَغَـٰرِبَهَا ٱلَّتِى بَـٰرَكْنَا فِيهَا ۖ﴾

“ನಾವು ‘ಬರಕತ್’ ನೀಡಿದ, ಭೂಮಿಯ ಪಶ್ಚಿಮ ಮತ್ತು ಪೂರ್ವ ಪ್ರದೇಶಗಳನ್ನು...” [ಅಲ್‌ಅಅ್‌ರಾಫ್ 7:137]

3. ಆಕಾಶದಿಂದ ಇಳಿಯುವ ಮತ್ತು ಭೂಮಿಯು ಉತ್ಪಾದಿಸುವ ವಸ್ತುಗಳಿಗೆ ಅಲ್ಲಾಹು ಬರಕತ್ ನೀಡಿ-ದ್ದಾನೆಂದು ಅಲ್ಲಾಹು ತಿಳಿಸಿಕೊಟ್ಟಿದ್ದಾನೆ. ಅಲ್ಲಾಹು ಹೇಳುತ್ತಾನೆ:

﴿وَلَوْ أَنَّ أَهْلَ ٱلْقُرَىٰٓ ءَامَنُوا۟ وَٱتَّقَوْا۟ لَفَتَحْنَا عَلَيْهِم بَرَكَـٰتٍ مِّنَ ٱلسَّمَآءِ وَٱلْأَرْضِ﴾

“ಆ ಪಟ್ಟಣಗಳ ಜನರು ವಿಶ್ವಾಸವಿಡುತ್ತಿದ್ದರೆ ಮತ್ತು

ಭಯಭಕ್ತಿಯೊಂದಿಗೆ ಜೀವಿಸುತ್ತಿದ್ದರೆ, ನಾವು ಅವರಿಗೆ ಆಕಾಶದಿಂದ ಮತ್ತು ಭೂಮಿಯಿಂದ 'ಬರಕತ್'ಗಳನ್ನು ತೆರೆದುಕೊಡುತ್ತಿದ್ದೆವು." [ಅಲ್‌ಅಅ್‌ರಾಫ್ 7:96]

ಇವೆಲ್ಲವೂ ಸಾಮಾನ್ಯ ರೂಪದಲ್ಲಿರುವ ಬರಕತ್‌ಗಳು. ಈ ಬರಕತ್‌ಗಳ ಮೂಲಕ ಪ್ರಯೋಜನ, ಒಳಿತು, ಹೆಚ್ಚಳ ಮತ್ತು ಅಭಿವೃದ್ಧಿ ಮುಂತಾದವುಗಳು ಲಭ್ಯವಾಗುತ್ತದೆ.

ಅಲ್ಲಾಹು ಅಂಬಿಯಾ ಮುರ್ಸಲ್‌ಗಳಲ್ಲಿ ಇಟ್ಟಿರುವ ವಿಶೇಷ ಮತ್ತು ಅಬೇಧ್ಯ ಬರಕತ್, ಸ್ಥಳ ಮತ್ತು ಗುಣ-ವಿಶೇಷಣಗಳಲ್ಲಿರುವ ವಿಶೇಷ ಬರಕತ್‌ನಂತೆಯಲ್ಲ. ಕಾರಣ ಅಲ್ಲಾಹು ಅಂಬಿಯಾ ಮುರ್ಸಲ್‌ಗಳಲ್ಲಿ ಇಟ್ಟಿ-ರುವ ಬರಕತ್ ಅವರ ಸತ್ವದೊಂದಿಗೆ ಸಂಪರ್ಕವಿರುವ ಎಲ್ಲ ವಸ್ತುಗಳಿಗೂ ವರ್ಗಾವಣೆಯಾಗುತ್ತದೆ.

ಆದರೆ ಅಲ್‌ಮಸ್ಜಿದುಲ್ ಹರಾಂ, ಅಲ್‌ಮಸ್ಜಿದುನ್ನಬ-ವೀ ಮುಂತಾದ ಆರಾಧನಾ ಸ್ಥಳಗಳಲ್ಲಿರುವ ವಿಶೇಷ

ಬರಕತ್ ಆ ಮಸೀದಿಯ ಎಲ್ಲ ಭಾಗಗಳಿಗೂ ವರ್ಗಾವ-ಣೆಯಾಗುವುದಿಲ್ಲ. ಈ ಕಾರಣದಿಂದಲೇ ವಿದ್ವಾಂಸರು ಒಮ್ಮತದಿಂದ ಅಭಿಪ್ರಾಯಪಟ್ಟ ಪ್ರಕಾರ ಮಸೀದಿಗಳ-ಲ್ಲಿ ಬರಕತ್ ಇದ್ದರೂ ಸಹ ಬರಕತ್‌ಗಾಗಿ ಮಸೀದಿಗಳ ಕಂಬಗಳನ್ನು, ಗೋಡೆಗಳನ್ನು ಸ್ಪರ್ಶಿಸುವುದು ಸಲ್ಲದು. ಇದರಿಂದ ತಿಳಿದುಬರುವ ಪ್ರಕಾರ, ಮಸೀದಿಗಳಲ್ಲಿರುವ ಬರಕತ್ ಭಕ್ತನು ಪಡೆಯುವ ಒಳಿತುಗಳಲ್ಲಿರುವ ಹೆಚ್ಚಳ ಮತ್ತು ಅಭಿವೃದ್ಧಿಯಾಗಿದೆ. ಕಾರಣ, ಅಲ್‌ಮಸ್ಜಿದುಲ್ ಹರಾಂನಲ್ಲಿ ನಿರ್ವಹಿಸುವ ಒಂದು ನಮಾಝ್ ಇತರ ಮಸೀದಿಗಳಲ್ಲಿ ನಿರ್ವಹಿಸುವ ಒಂದು ಲಕ್ಷ ನಮಾಝ್‌ಗೆ ಸಮ. ಅಲ್‌ಮಸ್ಜಿದುನ್ನಬವಿಯಲ್ಲಿ ನಿರ್ವಹಿಸುವ ಒಂದು ನಮಾಝ್ ಒಂದು ಸಾವಿರ ನಮಾಝ್‌ಗೆ ಸಮ.

ಇದು ಒಂದು ರೀತಿಯಲ್ಲಿ ಪ್ರವಾದಿಗಳಲ್ಲಿರುವ ಬರ-ಕತ್‌ನಂತೆ. ಕಾರಣ ಪ್ರವಾದಿಗಳಲ್ಲಿ ಎರಡು ವಿಧದ ಬರಕತ್‌ಗಳಿವೆ. ಒಂದು ಮೇಲೆ ಹೇಳಲಾದ ಬರಕತ್.

ಇನ್ನೊಂದು ಅವರನ್ನು ಅನುಸರಿಸುವ ಮೂಲಕ ಸಿಗುವ ಬರಕತ್. ಪ್ರವಾದಿಗಳ ಸುನ್ನತ್ತನ್ನು ಅನುಸರಿಸುವವರಿಗೆ, ಅವರ ಮಾರ್ಗದರ್ಶನದ ಮೂಲಕ ಮುನ್ನಡೆಯುವ-ವರಿಗೆ ಕರ್ಮದ ಪ್ರತಿಫಲದಲ್ಲಿ ಹೆಚ್ಚಳ ಮತ್ತು ಅಭಿವೃದ್ಧಿ ಲಭ್ಯವಾಗುತ್ತದೆ.

ಇದು ವಿಶೇಷ ಬರಕತ್‌ನ ಬಗೆಗಿನ ವಿವರಣೆ. ಇನ್ನು ಸಾಮಾನ್ಯ ಬರಕತ್‌ನ ಬಗ್ಗೆ ಹೇಳುವುದಾದರೆ, ಅದು ಎಲ್ಲ ಸಮಯಗಳಲ್ಲೂ ಲಭ್ಯವಲ್ಲ. ಅಥವಾ ಎಲ್ಲ ವಿ-ಧಗಳಲ್ಲೂ ಲಭ್ಯವಲ್ಲ. ಉದಾಹರಣೆಗೆ, ಆಕಾಶದಿಂದ ಬರುವ ಎಲ್ಲ ವಸ್ತುಗಳಲ್ಲೂ ಬರಕತ್ ಇರಬೇಕೆಂದಿಲ್ಲ. ಹಾಗೆಯೇ ಭೂಮಿ ಉತ್ಪಾದಿಸುವ ಎಲ್ಲ ವಸ್ತುಗಳಲ್ಲೂ ಯಾವಾಗಲೂ ಬರಕತ್ ಇರಬೇಕೆಂದಿಲ್ಲ. ಬದಲಾಗಿ, ಅಲ್ಲಾಹು ಅವುಗಳಿಗೆ ಬರಕತ್ ನೀಡಿದರೆ ಮಾತ್ರ ಅವುಗಳಲ್ಲಿ ಬರಕತ್ ಇರುತ್ತದೆ. ಅಲ್ಲಾಹು ಅವುಗಳ ಬರಕತ್ತನ್ನು ತೆಗೆದರೆ ಅವುಗಳಲ್ಲಿ ಬರಕತ್ ಇರುವುದಿಲ್ಲ.

ವ್ಯಕ್ತಿಗಳಲ್ಲಿ, ಸ್ಥಳಗಳಲ್ಲಿ ಮತ್ತು ಗುಣಗಳಲ್ಲಿರುವ ವಿಶೇಷ ಬರಕತ್ತಿನಂತೆ ಇದು ಅಬೇಧ್ಯವಲ್ಲ.

ಇಷ್ಟನ್ನು ತಿಳಿದುಕೊಂಡ ಬಳಿಕ ಕುರ್‌ಆನ್ ಮತ್ತು ಸುನ್ನ-ತ್ತಿನಲ್ಲಿ ಬಂದಿರುವ ಬರಕತ್ ಎಂಬ ಶಬ್ದದ ಪಾರಿಭಾಷಿಕ ಅರ್ಥದ ಬಗ್ಗೆ ತಿಳಿಯೋಣ. ಕುರ್‌ಆನ್ ಮತ್ತು ಸುನ್ನತ್ತಿನ-ಲ್ಲಿ ಬಂದಿರುವ ಬರಕತ್ ಎರಡು ವಿಧದಲ್ಲಿದೆ.

ಒಂದು: ಸತ್ವದಲ್ಲಿರುವ ಬರಕತ್. ಈ ಬರಕತ್ ಆ ಸತ್ವ-ದೊಂದಿಗೆ ಸಂಪರ್ಕವಿರುವ ವಸ್ತುಗಳಿಗೂ ವರ್ಗಾವಣೆ-ಯಾಗಿ ಆ ವಸ್ತುಗಳನ್ನು ಸಹ ಬರಕತ್ ಇರುವಂತದ್ದಾಗಿ ಮಾಡುತ್ತದೆ. ಇದು ಅಂಬಿಯಾ ಮುರ್ಸಲ್‌ಗಳಿಗೆ ಮಾತ್ರ ವಿಶೇಷವಾಗಿ ಇರುವ ಬರಕತ್. ಇದು ಅವರ ಹೊರತು ಇನ್ನಾರಿಗೂ ಇಲ್ಲ. ಅಬೂಬಕರ್(ﷺ), ಉಮರ್(ﷺ), ಉಸ್ಮಾನ್(ﷺ), ಅಲೀ(ﷺ) ಮುಂತಾದ ಹಿರಿಯ ಸಹಾ-ಬಾಗಳಿಗೂ ಈ ಬರಕತ್ ಇಲ್ಲ.

ಅಂಬಿಯಾಗಳಲ್ಲಿರುವ ಈ ಬರಕತ್ ಅವರು ಆಹ್ವಾನ ನೀಡಿದ ಮಾರ್ಗದಲ್ಲಿ ಚಲಿಸುವವರಿಗೆ, ಅವರನ್ನು ಅನುಸರಿಸಿ ಕರ್ಮವೆಸಗುವವರಿಗೆ, ಅವರ ಆಜ್ಞೆಗಳನ್ನು ಪಾಲಿಸುವವರಿಗೆ ಮತ್ತು ಅವರ ವಿರೋಧಗಳನ್ನು ವರ್ಜಿಸುವವರಿಗಲ್ಲದೆ ಇನ್ನಾರಿಗೂ ಲಭ್ಯವಾಗುವುದಿಲ್ಲ. ಈ ಕಾರಣದಿಂದಲೇ ಉಹುದ್ ಯುದ್ಧದ ಸಂದರ್ಭದಲ್ಲಿ ಪ್ರವಾದಿ(ﷺ) ರವರ ಬರಕತ್ ಸಹಾಬಾಗಳಿಗೆ ಪ್ರಯೋಜನಪಡಲಿಲ್ಲ. ಕಾರಣ, ಅವರು ಪ್ರವಾದಿ(ﷺ) ರವರ ಆಜ್ಞೆಯನ್ನು ಧಿಕ್ಕರಿಸಿದ್ದರು.

ಒಬ್ಬರಿಂದ ಇನ್ನೊಬ್ಬರಿಗೆ ವರ್ಗಾವಣೆಯಾಗುವ ಈ ಬರಕತ್ ಪ್ರವಾದಿ(ﷺ) ರವರ ಮರಣದೊಂದಿಗೆ ಸಂಪೂರ್ಣ ಕೊನೆಗೊಂಡಿದೆ. ಇನ್ನು ಅಂತಹ ಒಂದು ಬರಕತ್ ಈ ಭೂಮಿಯಲ್ಲಿಲ್ಲ. ಆದರೆ ಪ್ರವಾದಿ(ﷺ) ರದ್ದೆಂದು ದೃಢಪಟ್ಟಿರುವ ಅವರ ದೇಹದ ಭಾಗಗಳ ಹೊರತು. ಉದಾ: ಅವರ ಕೂದಲು, ಬೆವರು ಇತ್ಯಾದಿ.

ಸಹಾಬಾಗಳ ಕಾಲಘಟ್ಟವು ಕೊನೆಗೊಳ್ಳುವುದರೊಡನೆ ಈ ದೃಢಪಡುವಿಕೆಯೂ ಕ್ಷೀಣವಾಗಿದೆ.

ಎರಡು: ಕರ್ಮ ಮತ್ತು ಅನುಸರಣೆಯಲ್ಲಿರುವ ಬರಕತ್. ಪ್ರವಾದಿ(ﷺ) ಯವರ ಸುನ್ನತ್ತಿಗೆ ಹೊಂದಾಣಿಕೆಯಾಗುವ ಕರ್ಮಗಳನ್ನು ನಿರ್ವಹಿಸುವ ಎಲ್ಲರಲ್ಲೂ ಈ ಬರಕತ್ ಇರುತ್ತದೆ. ಆದ್ದರಿಂದ ಪ್ರತಿಯೊಬ್ಬ ಮುಸಲ್ಮಾನನಲ್ಲೂ, ಅವನು ಅಲ್ಲಾಹನ ಆಜ್ಞೆ ಮತ್ತು ವಿರೋಧವನ್ನು ಎಷ್ಟರ ಮಟ್ಟಿಗೆ ಪಾಲಿಸುತ್ತಾನೋ ಅಷ್ಟರ ಮಟ್ಟಿಗೆ ಅವನಲ್ಲಿ ಈ ಬರಕತ್ ಇರುತ್ತದೆ. ಈ ಕಾರಣದಿಂದಲೇ ಇಮಾಂ ಅಲ್‌ಬುಖಾರಿ (9/569) ವರದಿ ಮಾಡಿದ ಹದೀಸೊಂದರಲ್ಲಿ ಹೀಗೆ ಕಾಣಬಹುದು:

«وَإِنَّ مِنَ الشَّجَرِ لَمَا بَرَكَتُهُ كَبَرَكَةِ الْمُسْلِمِ».

“ಖಂಡಿತವಾಗಿಯೂ ಮುಸ್ಲಿಮನಲ್ಲಿರುವ ಬರಕತ್ತಿನಂ-

ತೆಯೇ ಬರಕತ್ ಇರುವ ಒಂದು ಮರವಿದೆ." ಅದು ಖರ್ಜೂರದ ಮರ.

ಆದ್ದರಿಂದ ಪ್ರತಿಯೊಬ್ಬ ಮುಸಲ್ಮಾನನಲ್ಲೂ ಅವನ ಸಾಮರ್ಥ್ಯಕ್ಕೆ ತಕ್ಕಂತೆ ಬರಕತ್ ಇದೆ. ಆದರೆ ಅದು ಸತ್ವಕ್ಕೆ ಸಂಬಂಧಿಸಿದ ಬರಕತ್ ಅಲ್ಲ. ಬದಲಾಗಿ ಕರ್ಮಕ್ಕೆ ಸಂಬಂಧಿಸಿದ ಬರಕತ್.

ಸಜ್ಜನರಾದ ಅಲ್ಲಾಹನ ದಾಸರಲ್ಲಿ ಅವರು ಎಷ್ಟರ ಮಟ್ಟಿಗೆ ಅಲ್ಲಾಹನ ಮತ್ತು ರಸೂಲರ ಅನುಸರಣೆ ಮಾಡುತ್ತಾರೋ ಅಷ್ಟರ ಮಟ್ಟಿಗೆ ಅವರಲ್ಲಿ ಕರ್ಮಕ್ಕೆ ಸಂಬಂಧಿಸಿದ ಬರಕತ್ ಇರುತ್ತದೆ. ಸುನ್ನತ್ತಿನ ಬಗ್ಗೆ ಜ್ಞಾನವಿರುವ ವಿದ್ವಾಂಸನಲ್ಲಿ ಕರ್ಮಕ್ಕೆ ಸಂಬಂಧಿಸಿದ ಬರಕತ್ ಇರುತ್ತದೆ. ಅಲ್ಲಾಹನ ಗ್ರಂಥವನ್ನು ದಿನನಿತ್ಯ ಪಾರಾಯಣ ಮಾಡುವ ಮೂಲಕ ಮತ್ತು ಅದರಲ್ಲಿರುವ ಪ್ರಕಾರ ಕರ್ಮವೆಸಗುವ ಮೂಲಕ ಅದನ್ನು ಸಂರಕ್ಷಿಸುವವನಲ್ಲಿ ಕರ್ಮಕ್ಕೆ ಸಂಬಂಧಿಸಿದ ಬರಕತ್ ಇರುತ್ತದೆ.

ಇಸ್ಲಾಂ ಧರ್ಮವನ್ನು ಅನುಸರಿಸುವುದರಲ್ಲಿ, ಕಡ್ಡಾಯ ಕರ್ಮಗಳನ್ನು ನಿರ್ವಹಿಸುವುದರಲ್ಲಿ, ನಿಷಿದ್ಧ ಕರ್ಮಗಳನ್ನು ವರ್ಜಿಸುವುದರಲ್ಲಿ ಅತೀವ ತತ್ಪರತೆ ತೋರುವ ಸಜ್ಜನರಲ್ಲಿ, ಸಾಲಿಹೀನ್‌ಗಳಲ್ಲಿ ಉನ್ನತ ಮಟ್ಟದಲ್ಲಿ ಬರಕತ್ ಇರುತ್ತದೆ.

ಒಟ್ಟಿನಲ್ಲಿ, ಪ್ರವಾದಿಗಳಿಗೆ ಸಂಬಂಧಿಸಿದಂತೆ ಬರಕತ್ ಎರಡು ವಿಧಗಳಲ್ಲಿದೆ. ಒಂದು ಅವರ ಸತ್ವಕ್ಕೆ ಸಂಬಂಧಿಸಿದ ಬರಕತ್. ಇನ್ನೊಂದು ಅವರ ಅನುಸರಣೆಗೆ ಸಂಬಂಧಿಸಿದ ಬರಕತ್. ಆದರೆ ಪ್ರವಾದಿಗಳಲ್ಲದ ಇತರ ಮನುಷ್ಯರಿಗೆ ಇರುವುದು ಒಂದೇ ವಿಧದ ಬರಕತ್. ಅಂದರೆ ಕರ್ಮ, ಜ್ಞಾನ ಮತ್ತು ಅನುಸರಣೆಯ ಮೂಲಕ ಸಿಗುವ ಬರಕತ್. ಈ ಬರಕತ್ ವರ್ಗಾವಣೆಯಾಗುವುದು ಕರ್ಮಗಳ ಮೂಲಕ ಮಾತ್ರ. ಸತ್ವದ ಮೂಲಕವೋ, ದೈಹಿಕ ಭಾಗಗಳ ಮೂಲಕವೋ ಈ ಬರಕತ್ ವರ್ಗಾವಣೆಯಾಗುವುದಿಲ್ಲ.

ತಯಮ್ಮುಮ್‌ನ ವಿಧಿಯ ಅವತೀರ್ಣಕ್ಕಿರುವ ಕಾರಣದ ಬಗ್ಗೆ ಉಸೈದ್ ಇಬ್ನ್ ಹುದೈರ್(ﷺ) ಹೇಳುತ್ತಾರೆ:

لَقَدْ بَارَكَ اللَّهُ لِلنَّاسِ فِيكُمْ يَا آلَ أَبِي بَكْرٍ.

"ಓ ಅಬೂಬಕರ್‌ರವರ ಕುಟುಂಬದವರೇ! ನಿಮ್ಮ ಮೂಲಕ ಅಲ್ಲಾಹು ಜನರಿಗೆ ಬರಕತ್ತನ್ನು ನೀಡಿದ್ದಾನೆ." [ಅಲ್‌ಬುಖಾರಿ]

ಅಲ್‌ಬುಖಾರಿ ಮತ್ತು ಮುಸ್ಲಿಂನಲ್ಲಿರುವ ಇನ್ನೊಂದು ವರದಿಯಲ್ಲಿ ಹೀಗಿದೆ:

مَا هِيَ بِأَوَّلِ بَرَكَتِكُمْ يَا آلَ أَبِي بَكْرٍ.

"ಓ ಅಬೂಬಕರ್‌ರವರ ಕುಟುಂಬದವರೇ! ಇದು ಉಂಟಾದುದು ನಿಮ್ಮ ಮೊದಲ ಬರಕತ್ತಿನಿಂದಲ್ಲ."

ಇವೆರಡರ ಅರ್ಥ ಒಂದೇ. ಆದರೆ ಪ್ರವಾದಿ(ﷺ) ಯವರ ಮೂಲಕ ಬರಕತ್ತನ್ನು ಆಶಿಸುವಂತೆ, ಅಂದರೆ ಪ್ರವಾದಿ

(ﷺ) ಯವರ ಕೂದಲು ಮುಂತಾದವುಗಳ ಮೂಲಕ ಬರಕತ್ತನ್ನು ಆಶಿಸುವಂತೆ, ಅಬೂಬಕರ್‌ರವರ ಕುಟುಂ- ಬದವರಲ್ಲಿ ಬರಕತ್ ಇದ್ದೂ ಸಹ ಉಸೈದ್(﵁) ರವರು ಅವರ ಮೂಲಕ ಬರಕತ್ತನ್ನು ಆಶಿಸಲಿಲ್ಲ. ಕಾರಣ ಅಬೂಬಕರ್‌ರವರ ಕುಟುಂಬದವರಲ್ಲಿ ಇದ್ದ ಬರಕತ್ ಕರ್ಮಕ್ಕೆ ಸಂಬಂಧಿಸಿದ ಬರಕತ್ ಆಗಿತ್ತೇ ವಿನಾ ಪ್ರವಾ- ದಿಗಳಲ್ಲಿರುವಂತೆ ಸತ್ವಕ್ಕೆ ಸಂಬಂಧಿಸಿದ ಬರಕತ್ ಅಲ್ಲ.

ಪ್ರವಾದಿ(ﷺ)ಯವರು ಜುವೈರಿಯಾ(﵂)ರನ್ನು ವಿವಾ- ಹವಾದ ಸಂದರ್ಭ ಆಯಿಶಾ(﵂) ರವರು ಹೇಳುತ್ತಾರೆ:

فَمَا رَأَيْتُ امْرَأَةً كَانَتْ أَعْظَمَ بَرَكَةً عَلَى قَوْمِهَا مِنْهَا.

“ತನ್ನ ಜನತೆಗೆ ಜುವೈರಿಯಾಗಿಂತಲೂ ಹೆಚ್ಚು ಬರಕ- ತ್ತನ್ನು ಹೊಂದಿರುವ ಬೇರೊಬ್ಬ ಮಹಿಳೆಯನ್ನು ನಾನು ಕಂಡಿಲ್ಲ.” [ಅಹ್ಮದ್ 6/277; ಅಬೂ ದಾವೂದ್]

ಇದು ಪ್ರವಾದಿ(ﷺ) ರನ್ನು ವಿವಾಹವಾಗುವ ಮೂಲಕ ಜುವೈರಿಯಾ(رضي الله عنها) ರಿಗೆ ಲಭ್ಯವಾದ ಬರಕತ್. ಏಕೆಂದರೆ, ಆ ವಿವಾಹದ ಕಾರಣದಿಂದಾಗಿ ಜುವೈರಿಯಾ(رضي الله عنها) ರ ಜನತೆಯಲ್ಲಿ ಸೇರಿದ ಅನೇಕ ಮಂದಿ ಸ್ವತಂತ್ರರಾದರು.

ಮುಹಮ್ಮದ್(ﷺ) ರವರ ಮೂಲಕ ಬರಕತ್ತನ್ನು ಆಶಿಸುವುದು

ಪ್ರವಾದಿ ಮುಹಮ್ಮದ್(ﷺ) ರವರ ಸತ್ವದಲ್ಲಿ ಬರಕತ್ ಇದೆ. ಅವರ ಗುಣವಿಶೇಷಣಗಳಲ್ಲಿ ಬರಕತ್ ಇದೆ. ಅವರ ಪ್ರವೃತ್ತಿಗಳಲ್ಲಿ ಬರಕತ್ ಇದೆ. ಪ್ರವಾದಿ(ﷺ) ಯವರ ದೇಹದಿಂದ ಬೇರ್ಪಟ್ಟ ಕೂದಲು, ವುದೂ ನಿರ್ವಹಿಸಿದ ನೀರು, ಬೆವರು ಮುಂತಾದವುಗಳ ಮೂಲಕ ಸಹಾಬಾಗಳು ಬರಕತ್ತನ್ನು ಆಶಿಸುತ್ತಿದ್ದರೆಂಬ ವಿಷಯ ಸಹೀಹಾದ ಹದೀಸ್‌ಗಳ ಮೂಲಕ ದೃಢಪಟ್ಟಿದೆ.

ಅಲ್ಲಾಹು ಇತರೆಲ್ಲ ಪ್ರವಾದಿಗಳಿಗೆ ಮತ್ತು ಸಂದೇಶವಾ-

ಹಕರಿಗೆ ನೀಡಿದ ಬರಕತ್‌ಗಿಂತಲೂ ಹೆಚ್ಚಿನ ಬರಕತ್ತನ್ನು ಪ್ರವಾದಿ(ﷺ) ರಿಗೆ ನೀಡಿದ್ದಾನೆ. ಅವರ ದೇಹದ ಎಲ್ಲ ಭಾಗಗಳಲ್ಲೂ ಬರಕತ್ ಇರುವುದರಿಂದ ಆ ಭಾಗಗಳ ಮೂಲಕ ಬರಕತ್ ಆಶಿಸುವುದಕ್ಕೆ ಅನುಮತಿಯಿದೆ. ಸಹಾಬಾಗಳು ಅವುಗಳ ಮೂಲಕ ಬರಕತ್ತನ್ನು ಆಶಿ-ಸುತ್ತಿದ್ದರು.

ಆದರೆ ಅವರೊಂದಿಗೆ ಸಂಬಂಧವಿರುವ ಸ್ಥಳಗಳ ಬಗ್ಗೆ ಹೇಳುವುದಾದರೆ, ಉದಾ: ಅವರು ನಡೆದಾಡಿದ ನೆಲ, ಅವರು ನಮಾಝ್ ಮಾಡಿದ ಸ್ಥಳ, ಅವರು ಪ್ರಯಾಣದ ಮಧ್ಯೆ ಇಳಿದ ಪ್ರದೇಶ, ಮುಂತಾದವುಗಳ ಬಗ್ಗೆ ಹೇಳು-ವುದಾದರೆ ಪ್ರವಾದಿ(ﷺ) ಯವರ ದೇಹದ ಬರಕತ್ ಈ ಸ್ಥಳಗಳಿಗೆ ವರ್ಗಾವಣೆಯಾಗುತ್ತದೆ ಎಂದು ಸೂಚಿಸುವ ಸ್ಪಷ್ಟವಾದ ಪುರಾವೆಯಿಲ್ಲ. ಈ ಕಾರಣದಿಂದಲೇ ಸಹಾ-ಬಾಗಳಲ್ಲಿ ಯಾರೂ ಸಹ ಪ್ರವಾದಿ(ﷺ) ಯವರ ಜೀವಿತ ಕಾಲದಲ್ಲಾಗಲಿ, ಮರಣಾನಂತರವಾಗಲಿ, ಆ ಸ್ಥಳಗಳ

ಮೂಲಕ ಬರಕತ್ತನ್ನು ಆಶಿಸಿದ ಉದಾಹರಣೆಗಳಿಲ್ಲ.

ಆದ್ದರಿಂದ ಯಾವೆಲ್ಲ ಸ್ಥಳಗಳಲ್ಲಿ ಪ್ರವಾದಿ(ﷺ) ಯವರು ನಡೆದಾಡಿದ್ದರೋ, ಯಾವೆಲ್ಲ ಸ್ಥಳಗಳಲ್ಲಿ ಅವರು ತಂಗಿದ್ದರೋ ಆ ಸ್ಥಳಗಳ ಮೂಲಕ ಬರಕತ್ತನ್ನು ಆಶಿಸುವುದಕ್ಕೆ ಇಸ್ಲಾಂನಲ್ಲಿ ಅನುಮತಿಯಿಲ್ಲ. ಕಾರಣ ಇದು ಆ ಸ್ಥಳಗಳನ್ನು ಗೌರವಿಸುವುದಕ್ಕೆ ಹೇತುವಾಗುತ್ತದೆ. ಆದರೆ ಅಂತಹ ಸ್ಥಳಗಳನ್ನು ಗೌರವಿಸಲು ನಮ್ಮೊಂದಿಗೆ ಆಜ್ಞಾಪಿಸಲಾಗಿಲ್ಲ. ಮಾತ್ರವಲ್ಲ, ಅದು ಶಿರ್ಕ್ ಉಂಟಾಗುವುದಕ್ಕೂ ಕಾರಣವಾಗುತ್ತದೆ. ಹೆಚ್ಚಿನ ಸಮುದಾಯಗಳು ಪಥಭ್ರಷ್ಟರಾಗಿರುವುದು ಮತ್ತು ನಾಶವಾಗಿರುವುದು ಅವರು ತಮ್ಮ ಪ್ರವಾದಿಗಳ ಕುರುಹುಗಳನ್ನು ಹಿಂಬಾಲಿಸಿ ಗೌರವಿಸಲು ಆರಂಭಿಸಿದ ಕಾರಣದಿಂದಲೇ ಆಗಿತ್ತು.

ಅಲ್‌ಮಅ್‌ರೂರ್ ಇಬ್ನ್ ಸುವೈದ್ ಅಲ್‌ಅಸದೀ(رحمه الله) ಹೇಳುತ್ತಾರೆ:

خَرَجْتُ مَعَ أَمِيرِ الْمُؤْمِنِينَ عُمَرَ بْنِ الْخَطَّابِ مِنْ مَكَّةَ إِلَى الْمَدِينَةِ، فَلَمَّا أَصْبَحْنَا صَلَّى بِنَا الْغَدَاةَ، ثُمَّ رَأَى النَّاسَ يَذْهَبُونَ مَذْهَبًا، فَقَالَ: أَيْنَ يَذْهَبُ هَؤُلَاءِ؟ قِيلَ: يَا أَمِيرَ الْمُؤْمِنِينَ! مَسَجِدٌ صَلَّى فِيهِ رَسُولُ اللَّهِ صَلَّى اللَّهُ عَلَيْهِ وَسَلَّمَ، هُمْ يَأْتُونَ يُصَلُّونَ فِيهِ. فَقَالَ: إِنَّمَا هَلَكَ مَنْ كَانَ قَبْلَكُمْ بِمِثْلِ هَذَا، يَتَّبِعُونَ آثَارَ أَنْبِيَائِهِمْ، فَيَتَّخِذُونَهَا كَنَائِسَ وَبِيَعًا، مَنْ أَدْرَكَتْهُ الصَّلَاةُ فِي هَذِهِ الْمَسَاجِدِ فَلْيُصَلِّ، وَمَنْ لَا فَلْيَمْضِ، وَلَا يَتَعَمَّدْهَا.

“ಒಮ್ಮೆ ನಾವು ಅಮೀರುಲ್ ಮುಅ್‌ಮಿನೀನ್ ಉಮರ್ ಇಬ್ನುಲ್ ಖತ್ತಾಬ್(ؓ) ರೊಡನೆ ಮಕ್ಕಾದಿಂದ ಮದೀ-

ನಕ್ಕೆ ಪ್ರಯಾಣ ಮಾಡುತ್ತಿದ್ದೆವು. ಬೆಳಗಾದಾಗ ಅವರು ನಮ್ಮೊಂದಿಗೆ ಫಜ್ರ್ ನಮಾಝ್ ನಿರ್ವಹಿಸಿದರು. ನಮಾಝ್‌ನ ಬಳಿಕ ಜನರು ಒಂದೇ ಸಮನೆ ಓಡು-ವುದನ್ನು ಕಂಡಾಗ, ಇವರು ಎಲ್ಲಿಗೆ ಹೋಗುತ್ತಿದ್ದಾರೆಂ-ದು ಉಮರ್(رضي الله عنه) ಕೇಳಿದರು. ಓ ಅಮೀರುಲ್ ಮು-ಅ್‌ಮಿನೀನ್! ಇಲ್ಲೇ ಸಮೀಪ ಪ್ರವಾದಿ(ﷺ) ಯವರು ನಮಾಝ್ ಮಾಡಿದ ಒಂದು ಮಸೀದಿಯಿದೆ. ಆ ಮಸೀ-ದಿಯಲ್ಲಿ ನಮಾಝ್ ನಿರ್ವಹಿಸಲು ಅವರು ಹೋಗುತ್ತಿ-ದ್ದಾರೆ ಎಂದು ಯಾರೋ ಉತ್ತರಿಸಿದರು. ಆಗ ಉಮರ್ (رضي الله عنه) ಹೇಳಿದರು: ನಿಮಗಿಂತ ಮುಂಚಿನವರು ನಾಶ-ವಾದದ್ದು ಇಂತಹ ಕೃತ್ಯಗಳನ್ನೆಸಗಿದ ಕಾರಣದಿಂದಲೇ. ಅವರು ಅವರ ಪ್ರವಾದಿಗಳ ಕುರುಹುಗಳನ್ನು ಹಿಂಬಾ-ಲಿಸಿದರು. ಆ ಕುರುಹುಗಳಿರುವ ಸ್ಥಳಗಳಲ್ಲಿ ಚರ್ಚುಗಳ-ನ್ನು ಮತ್ತು ಯಹೂದ ದೇವಾಲಯಗಳನ್ನು ನಿರ್ಮಿಸಿದ-ರು. ಆದ್ದರಿಂದ ಇಂತಹ ಮಸೀದಿಗಳ ಬಳಿಗೆ ಬರುವಾಗ

ನಿಮ್ಮಲ್ಲಿ ಯಾರಿಗಾದರೂ ನಮಾಝ್‍ನ ಸಮಯವಾದರೆ ಮಾತ್ರ ಆ ಮಸೀದಿಗೆ ತೆರಳಿ ನಮಾಝ್ ನಿರ್ವಹಿಸಿರಿ. ನಮಾಝ್‍ನ ಸಮಯವಾಗದಿದ್ದರೆ ನಿಮ್ಮ ಪ್ರಯಾಣವನ್ನು ಮುಂದುವರಿಸಿರಿ. ಉದ್ದೇಶಪೂರ್ವಕ ಆ ಮಸೀದಿಯಲ್ಲಿ ನಮಾಝ್ ನಿರ್ವಹಿಸಲು ತೆರಳಬೇಡಿ.” [ಸಈದ್ ಇಬ್ನ್ ಮನ್ಸೂರ್ ತಮ್ಮ ಸುನನ್‍ನಲ್ಲಿ, ಇಬ್ನ್ ಅಬೀ ಶೈಬಾ ತಮ್ಮ ಮುಸನ್ನಫ್‍ನಲ್ಲಿ (2/376) ಮತ್ತು ಅಂದಲುಸ್‍ನ ಮುಹದ್ದಿಸ್ ಆಗಿದ್ದ ಮುಹಮ್ಮದ್ ಇಬ್ನ್ ವದ್ದಾಹ್ ಅಲ್‍ಕುರ್ತುಬೀ ತಮ್ಮ ‘ಅಲ್‍ಬಿದಉ ವನ್ನಹ್ಯು ಅನ್‍ಹಾ’ ಎಂಬ ಕೃತಿಯಲ್ಲಿ (ಪುಟ 41) ಸಹೀಹಾದ ಸನದ್‍ನ ಮೂಲಕ ಇದನ್ನು ವರದಿ ಮಾಡಿದ್ದಾರೆ.]

ಇದು ಅಲ್‍ಖಲೀಫತುರ್ರಾಶಿದ್ ಉಮರ್ ಇಬ್ನುಲ್ ಖತ್ತಾಬ್(ﷺ) ರ ಮಾತು. ಇವರ ಬಗ್ಗೆ ಪ್ರವಾದಿ(ﷺ) ಯವರು ಹೀಗೆ ಹೇಳಿದ್ದಾರೆ:

«إِنَّ اللَّهَ عَزَّ وَجَلَّ جَعَلَ الْحَقَّ عَلَى قَلْبِ عُمَرَ وَلِسَانِهِ».

“ಖಂಡಿತವಾಗಿಯೂ ಅಲ್ಲಾಹು ಉಮರ್ ರ ಹೃದಯ ಮತ್ತು ನಾಲಗೆಯಲ್ಲಿ ಸತ್ಯವನ್ನು ಇಟ್ಟಿದ್ದಾನೆ.” [ಅಹ್ಮದ್, ಅಬೂದಾವೂದ್]

ಕುರುಹುಗಳನ್ನು ಹಿಂಬಾಲಿಸುತ್ತಾ ಸಾಗುವ ಈ ಪರಿಪಾ-ಠವನ್ನು ವಿರೋಧಿಸುವ ಉಮರ್(ﷺ) ರ ಈ ಮಾತು ಅಲ್ಲಾಹು ಅವರ ನಾಲಗೆಯಲ್ಲಿಟ್ಟ ಸತ್ಯವೆನ್ನುವುದರಲ್ಲಿ ಎರಡು ಮಾತಿಲ್ಲ.

ಇಬ್ನ್ ವದ್ದಾಹ್(ﷺ) ಹೇಳುತ್ತಾರೆ:

وَكَانَ مَالِكُ بْنُ أَنَسٍ وَغَيْرُهُ مِنْ عُلَمَاءِ الْمَدِينَةِ يَكْرَهُونَ إِتْيَانَ تِلْكَ الْمَسَاجِدَ، وَتِلْكَ الْآثَارَ لِلنَّبِيِّ صَلَّى اللَّهُ عَلَيْهِ وَسَلَّمَ،

مَا عَدَا قُبَاءَ وَأُحُدًا.

“ಪ್ರವಾದಿ(ﷺ) ರಿಗೆ ಸಂಬಂಧಿಸಿದ ಆ ಮಸೀದಿಗಳ ಮತ್ತು ಆ ಕುರುಹುಗಳ ಬಳಿಗೆ ತೆರಳುವುದನ್ನು ಇಮಾಂ ಮಾಲಿಕ್ ಇಬ್ನ್ ಅನಸ್(ﷺ) ಹಾಗೂ ಮದೀನದ ಇತರ ವಿದ್ವಾಂಸರು ಇಷ್ಟಪಡುತ್ತಿರಲಿಲ್ಲ. ಆದರೆ ಕುಬಾ ಮಸೀದಿ ಮತ್ತು ಉಹುದ್ ಪ್ರದೇಶದ ಹೊರತು.” [ಅಲ್‌ಬಿದಉ ವನ್ನಹ್ಯು ಅನ್‌ಹಾ ಪುಟ 43]

ಇಬ್ನುಲ್ ವದ್ದಾಹ್(ﷺ) ಹೇಳುತ್ತಾರೆ:

فَعَلَيْكُمْ بِالِاتِّبَاعِ لِأَئِمَّةِ الْهُدَى الْمَعْرُوفِينَ، فَقَدْ قَالَ بَعْضُ مَنْ مَضَى: كَمْ مِنْ أَمْرٍ هُوَ الْيَوْمَ مَعْرُوفٌ عِنْدَ كَثِيرٍ مِنَ النَّاسِ كَانَ مُنْكَرًا عِنْدَ مَنْ مَضَى، وَمُتَحَبَّبٌ إِلَيْهِ بِمَا يَبْغَضُهُ عَلَيْهِ، وَمُتَقَرَّبٌ إِلَيْهِ بِمَا يَبْعُدُهُ مِنْهُ،

وَكُلُّ بِدْعَةٍ عَلَيْهَا زِينَةٌ وَبَهْجَةٌ.

“ಆದ್ದರಿಂದ ನಿಮಗೆ ಕಡ್ಡಾಯವಾಗಿರುವುದು ಸನ್ಮಾರ್ಗದಲ್ಲಿರುವ ಸುಪರಿಚಿತ ಇಮಾಂಗಳನ್ನು ಅನುಸರಿಸುವುದಾಗಿದೆ. ಗತ ವಿದ್ವಾಂಸರು ಹೇಳುತ್ತಿದ್ದರು: ಇಂದು ನಮ್ಮಲ್ಲಿ ಹೆಚ್ಚಿನವರು ಸದಾಚಾರವೆಂದು ಪರಿಗಣಿಸುವ ಎಷ್ಟೋ ವಿಷಯಗಳನ್ನು ಪೂರ್ವಿಕರು ದುರಾಚಾರಗಳೆಂದು ಪರಿಗಣಿಸುತ್ತಿದ್ದರು. ಇವರು ಇಷ್ಟಪಡುವ ವಿಷಯಗಳನ್ನು ಅವರು ದ್ವೇಷಿಸುತ್ತಿದ್ದರು. ಇವರು ಹತ್ತಿರಗೊಳಿಸುತ್ತಿರುವ ವಿಷಯಗಳನ್ನು ಅವರು ತಮ್ಮಿಂದ ದೂರ ಮಾಡುತ್ತಿದ್ದರು. ಎಲ್ಲ ಬಿದ್‌ಅತ್‌ಗಳ ಮೇಲೂ ಅಲಂಕಾರ ಮತ್ತು ಹರ್ಷದ ಲೇಪನವಿದೆ.”

ಇಬ್ನುಲ್ ವದ್ದಾಹ್(ﷺ) ಪ್ರಬಲ ಮಾತನ್ನೇ ಆಡಿದ್ದಾರೆ. ಅವರು ಹಿಜರಿ ಶಕೆ 286ರಲ್ಲಿ ನಿಧನರಾದರು.

ಇದರಿಂದ ತಿಳಿದುಬರುವ ಪ್ರಕಾರ ಅಸ್ಸಲಫು ಸ್ಸಾಲಿಹೂ-

ನ್‌ಗಳು ಸ್ಥಳ ಕುರುಹುಗಳ ಮೂಲಕ ಬರಕತ್ ಆಶಿಸು-ವುದನ್ನು ವಿರೋಧಿಸುತ್ತಿದ್ದರು. ಬರಕತ್ತನ್ನು ಆಶಿಸಿ ಆ ಸ್ಥ-ಳಗಳಿಗೆ ತೆರಳುವುದನ್ನು ಮತ್ತು ಅಲ್ಲೇ ತಂಗುವುದನ್ನು ವಿರೋಧಿಸುತ್ತಿದ್ದರು. ಇಬ್ನ್ ಉಮರ್(رضي الله عنه) ರ ಹೊರತು ಇತರೆಲ್ಲ ಸಹಾಬಾಗಳು ಈ ವಿಷಯದಲ್ಲಿ ಒಮ್ಮತದಲ್ಲಿದ್ದ-ರು. ಆದರೆ ಇಬ್ನ್ ಉಮರ್(رضي الله عنه) ಪ್ರವಾದಿ(ﷺ) ಯವರು ನಮಾಝ್ ಮಾಡಿದ ಸ್ಥಳಗಳನ್ನು ಹಿಂಬಾಲಿಸುತ್ತಾ ಅಲ್ಲಿ ನಮಾಝ್ ನಿರ್ವಹಿಸುತ್ತಿದ್ದರು.

ಇಬ್ನ್ ಉಮರ್(رضي الله عنه) ಮಾಡುತ್ತಿದ್ದ ಈ ಕೃತ್ಯವನ್ನು ಇತರ ಸಹಾಬಾಗಳಲ್ಲಿ ಯಾರಾದರೂ ಅನುಸರಿಸಿದ್ದರೆಂಬುದಕ್ಕೆ ಯಾವುದೇ ಪುರಾವೆಯಿಲ್ಲ.

ಇಬ್ನ್ ಉಮರ್(رضي الله عنه) ತಮ್ಮ ಕೃತ್ಯದ ಮೂಲಕ ಉದ್ದೇಶಿಸಿ-ದ್ದು ಆ ಸ್ಥಳಗಳ ಬರಕತ್ತನ್ನಲ್ಲ. ಬದಲಾಗಿ ಎಲ್ಲ ಚಲನವ-ಲನಗಳಲ್ಲೂ ಅವರು ಪ್ರವಾದಿ(ﷺ) ರನ್ನು ಪೂರ್ಣರೂ-ಪದಲ್ಲಿ ಹಿಂಬಾಲಿಸಲು ಬಯಸುತ್ತಿದ್ದರು. ಪ್ರವಾದಿ(ﷺ)

ಯವರು ನಮಾಝ್ ಮಾಡಿದ ಸ್ಥಳಗಳಲ್ಲಿ ನಮಾಝ್ ಮಾಡುವುದು ಇದರ ಒಂದು ಭಾಗವಾಗಿತ್ತು. ಈ ಕಾರಣದಿಂದಲೇ ಅವರು ಪ್ರವಾದಿ(ﷺ)ಯವರು ನಮಾಝ್ ಮಾಡಿದ ಸ್ಥಳಗಳನ್ನು ಹಿಂಬಾಲಿಸುತ್ತಿದ್ದರು.

ಇವತ್ತು ಕೆಲವರು ಹೇಳುವಂತೆ ಅವರು ಅದನ್ನು ಮಾಡಿದ್ದು ಬರಕತ್ ಪಡೆಯುವ ಉದ್ದೇಶದಿಂದಲ್ಲ. ಬದಲಾಗಿ ಪೂರ್ಣ ರೀತಿಯಲ್ಲಿ ಪ್ರವಾದಿ(ﷺ) ರನ್ನು ಹಿಂಬಾಲಿಸುವುದಕ್ಕಾಗಿತ್ತು. ಇಬ್ನ್ ಉಮರ್(رضي الله عنه) ರನ್ನು ಬಿಟ್ಟರೆ ಉಳಿದ ಸಹಾಬಾಗಳಲ್ಲಿ ಯಾರೂ ಈ ರೀತಿ ಮಾಡಿದ್ದಾಗಿ ವರದಿಯಿಲ್ಲ. ಮಾತ್ರವಲ್ಲ, ಕುರುಹುಗಳನ್ನು ಹಿಂಬಾಲಿಸುವುದನ್ನು ಉಮರ್(رضي الله عنه) ವಿರೋಧಿಸಿದ್ದರೆಂದು ಈಗಾಗಲೇ ವಿವರಿಸಲಾಗಿದೆ. ಇಬ್ನ್ ಉಮರ್(رضي الله عنه) ರ ಅಭಿಪ್ರಾಯಕ್ಕಿಂತಲೂ ಉಮರ್(رضي الله عنه) ರ ಮಾತಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಮಾತ್ರವಲ್ಲ, ಇಬ್ನ್ ಉಮರ್(رضي الله عنه) ರ ಈ ಅಭಿಪ್ರಾಯಕ್ಕೆ ಇತರ ಸಹಾಬಾಗಳ ಅಂಗೀಕಾರವಿಲ್ಲ.

ಆದ್ದರಿಂದ ಸತ್ಯವಿರುವುದು ಉಮರ್(ﷺ) ರ ಮಾತಿನಲ್ಲಿ ಮತ್ತು ಇತರ ಸಹಾಬಾಗಳ ಪ್ರವೃತ್ತಿಯಲ್ಲಿ ಎಂಬುದು ಸ್ಪಷ್ಟ. ನಾವು ಅನುಸರಿಸಬೇಕಾಗಿರುವುದೂ ಅದನ್ನೇ. ಹೆಚ್ಚು ಬಲ್ಲವನು ಅಲ್ಲಾಹು.

ಸಜ್ಜನರ ಮೂಲಕ ಬರಕತ್ ಆಶಿಸುವುದು

ಸತ್ವಗಳಿಗೆ ಸಂಬಂಧಿಸಿದ ಬರಕತ್ ಇರುವುದು ಅಂಬಿಯಾ ಮುರ್ಸಲ್‌ಗಳಲ್ಲಿ ಮಾತ್ರವೆಂದು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಇವರ ಹೊರತಾದ ಸಜ್ಜನರಲ್ಲಿ ಇರುವ ಬರಕತ್ ಕರ್ಮಗಳಿಗೆ ಸಂಬಂಧಿಸಿದ ಬರಕತ್ ಮಾತ್ರ. ಅಂದರೆ ಈ ಬರಕತ್ ಅವರ ಜ್ಞಾನ, ಕರ್ಮ ಮತ್ತು ಅನುಸರಣೆಗಳಿಂದ ಉದ್ಭವಿಸುತ್ತದೆಯೇ ವಿನಾ ಅವರ ಸತ್ವದಿಂದಲ್ಲ. ಸಜ್ಜನರ ಬರಕತ್ ಎಂದರೆ ಜನರನ್ನು ಒಳಿತಿನೆಡೆಗೆ ಕರೆಯುವುದು, ಜನರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುವುದು, ಉತ್ತಮ ಉದ್ದೇಶದಿಂದ ಜನರಿಗೆ

ಸಹಾಯ ಸಹಕಾರಗಳನ್ನು ಮಾಡುವ ಮೂಲಕ ಜನರಿಗೆ ಪ್ರಯೋಜನ ನೀಡುವುದು ಇತ್ಯಾದಿ.

ಸಜ್ಜನರು ನಿರ್ವಹಿಸಿದ ಕರ್ಮಗಳ ಬರಕತ್ತಿನ ಕಾರಣ-ದಿಂದ ಅಲ್ಲಾಹು ಜನರಿಗೆ ಒಳಿತನ್ನು ನೀಡುತ್ತಾನೆ ಮತ್ತು ಅವರ ಕರ್ಮಗಳ ಬರಕತ್ತಿನ ಕಾರಣದಿಂದ ಕೆಲವೊಮ್ಮೆ ಸಾಮೂಹಿಕ ಶಿಕ್ಷೆ ಮತ್ತು ಸಾರ್ವತ್ರಿಕ ದುರಂತಗಳನ್ನು ತಡೆಹಿಡಿಯುತ್ತಾನೆ. ಅಲ್ಲಾಹು ಹೇಳುತ್ತಾನೆ:

﴿ وَمَا كَانَ رَبُّكَ لِيُهْلِكَ ٱلْقُرَىٰ
بِظُلْمٍ وَأَهْلُهَا مُصْلِحُونَ ﴿١١٧﴾ ﴾

“ತಮ್ಮ ರಬ್ಬ್ ಆ ನಾಡುಗಳನ್ನು –ಅದರ ನಿವಾಸಿಗಳು ಸಜ್ಜನರಾಗಿರುವಾಗ– ಅನ್ಯಾಯವಾಗಿ ನಾಶ ಮಾಡಲಾ-ರನು.” [ಹೂದ್ 11:117]

ಆದರೆ ಸಜ್ಜನರ (ಔಲಿಯಾಗಳ) ಸತ್ವಗಳಲ್ಲಿ ಮತ್ತು ದೇಹ-

ಗಳಲ್ಲಿ ಬರಕತ್ ಇದೆಯೆಂದು ನಂಬಿ ಅವರನ್ನು ಸ್ಪರ್ಶಿಸು-ವುದು, ಅವರು ಕುಡಿದು ಬಾಕಿಯುಳಿಸಿದ್ದನ್ನು ಕುಡಿಯು-ವುದು, ಬರಕತ್‌ಗಾಗಿ ಅವರ ಕೈಗಳನ್ನು ಚುಂಬಿಸುವುದು ಇತ್ಯಾದಿಗಳನ್ನು ಮಾಡುವುದು ನಿಷಿದ್ಧವಾಗಿದೆ. ಇವುಗಳ-ನ್ನು ಮಾಡಲು ಅನುಮತಿಯಿರುವುದು ಪ್ರವಾದಿಗಳೊಂ-ದಿಗೆ ಮಾತ್ರ. ಕಾರಣ:

1. ಸಜ್ಜನರು ಪ್ರವಾದಿ(ﷺ) ಯವರ ಸಮೀಪದ ಸ್ಥಾನ-ವನ್ನೂ ತಲುಪುವುದಿಲ್ಲ. ಹೀಗಿರುವಾಗ ಬರಕತ್ ಮತ್ತು ಅನುಗ್ರಹದಲ್ಲಿ ಅವರು ಪ್ರವಾದಿ(ﷺ) ರಿಗೆ ಸಮವಾಗು-ವುದು ಹೇಗೆ?

2. ಪ್ರವಾದಿ(ﷺ) ಯವರ ಹೊರತು ಇತರರು ಬರಕತ್ತಿನ ವಿಷಯದಲ್ಲಿ ಪ್ರವಾದಿ(ﷺ) ರಂತೆಯೇ ಆಗಿದ್ದಾರೆಂಬು-ದಕ್ಕೆ ಯಾವುದೇ ಸ್ಪಷ್ಟ ಪುರಾವೆಯಿಲ್ಲ. ಪ್ರವಾದಿ(ﷺ) ರಿಗೆ ಮಾತ್ರವಿರುವ ಅನೇಕ ವೈಶಿಷ್ಟ್ಯಗಳಂತೆ ಇದು ಕೂಡ ಪ್ರವಾದಿ(ﷺ) ರಿಗೆ ಮಾತ್ರ ಇರುವ ವೈಶಿಷ್ಟ್ಯವಾಗಿದೆ.

3. ಪ್ರವಾದಿ(ﷺ) ರೊಡನೆ ಇತರರನ್ನು ಹೋಲಿಸುವು-ದನ್ನು ಖಂಡಿಸುತ್ತಾ ಇಮಾಂ ಅಶ್ಶಾತಿಬೀ(ರಹಿಮಹುಲ್ಲಾಹ್) ತಮ್ಮ ಅಲ್‌ಇಅ್‌ತಿಸಾಮ್ ಎಂಬ ಗ್ರಂಥದಲ್ಲಿ (2/6-7) ಹೇ-ಳುತ್ತಾರೆ:

أَنَّ الصَّحَابَةَ رَضِيَ اللَّهُ عَنْهُمْ لَمْ يَقَعْ مِنْ أَحَدٍ مِنْهُمْ شَيْءٌ مِنْ ذَلِكَ بِالنِّسْبَةِ إِلَى مَنْ خَلْفَهُ، إِذْ لَمْ يَتْرُكِ النَّبِيُّ صَلَّى اللَّهُ عَلَيْهِ وَسَلَّمَ بَعْدَهُ فِي الْأُمَّةِ أَفْضَلَ مِنْ أَبِي بَكْرٍ الصِّدِّيقِ رَضِيَ اللَّهُ عَنْهُ، فَهُوَ كَانَ خَلِيفَتَهُ، وَلَمْ يُفْعَلْ بِهِ شَيْءٌ مِنْ ذَلِكَ، وَلَا عُمَرَ رَضِيَ اللَّهُ عَنْهُ، وَهُوَ كَانَ أَفْضَلَ الْأُمَّةِ بَعْدَهُ، ثُمَّ كَذَلِكَ عُثْمَانُ، ثُمَّ عَلِيٌّ، ثُمَّ سَائِرُ الصَّحَابَةِ، الَّذِينَ لَا أَحَدَ أَفْضَلَ مِنْهُمْ فِي

الْأُمَّةِ، ثُمَّ لَمْ يَثْبُتْ لِوَاحِدٍ مِنْهُمْ مِنْ طَرِيقٍ صَحِيحٍ مَعْرُوفٍ أَنَّ مُتبَرِّكًا تبَرَّكَ بِهِ عَلَى أَحَدِ تِلْكَ الْوُجُوهِ أَوْ نَحْوِهَا، بَلِ اقْتَصَرُوا فِيهِمْ عَلَى الِاقْتِدَاءِ بِالْأَفْعَالِ وَالْأَقْوَالِ والسِّيَرِ الَّتِي اتَّبَعُوا فِيهَا النَّبِيَّ صَلَّى اللَّهُ عَلَيْهِ وَسَلَّمَ فَهُوَ إِذًا إِجْمَاعٌ مِنْهُمْ عَلَى تَرْكِ تِلْكَ الْأَشْيَاءِ.

“ಪ್ರವಾದಿ(ﷺ) ಯವರ ನಂತರದ ಸ್ಥಾನದಲ್ಲಿ ನಿಲ್ಲುವ ವ್ಯಕ್ತಿಗೆ ಸಂಬಂಧಿಸಿದಂತೆ ಸಹಾಬಾಗಳಲ್ಲಿ ಯಾರೂ ಕೂಡ ಆ ವ್ಯಕ್ತಿಯ ಮೂಲಕ ಬರಕತ್ತನ್ನು ಆಶಿಸಿಲ್ಲ. ಪ್ರವಾದಿ(ﷺ) ಯವರು ತಮ್ಮ ನಂತರದ ಸಮುದಾಯಕ್ಕೆ ಅಬೂಬಕರ್ ಅಸ್ಸಿದ್ದೀಕ್(رضي الله عنه) ರಿಗಿಂತಲೂ ಶ್ರೇಷ್ಠ ವ್ಯಕ್ತಿಯನ್ನು ಬಿಟ್ಟುಹೋಗಿಲ್ಲ. ಅವರು ಪ್ರವಾದಿ (ﷺ) ಯವರ ಪ್ರತಿನಿಧಿಯಾಗಿದ್ದರು. ಆದರೆ ಸಹಾ-

ಬಾಗಳಲ್ಲಿ ಯಾರೂ ಅಬೂಬಕರ್(رضي الله عنه) ರ ಮೂಲಕ ಬರಕತ್ ಆಶಿಸಲಿಲ್ಲ. ಉಮರ್(رضي الله عنه) ರ ಮೂಲಕವೂ ಅವರು ಬರಕತ್ ಆಶಿಸಲಿಲ್ಲ. ಅಬೂಬಕರ್(رضي الله عنه) ರನ್ನು ಬಿಟ್ಟರೆ ಸಮುದಾಯದ ಅತಿಶ್ರೇಷ್ಠ ವ್ಯಕ್ತಿ ಉಮರ್(رضي الله عنه). ಅದೇ ರೀತಿ ಉಸ್ಮಾನ್(رضي الله عنه), ಅಲೀ(رضي الله عنه) ಮತ್ತು ಇತರೆ-ಲ್ಲ ಸಹಾಬಾಗಳು. ಆದರೂ ಸಹಾಬಾಗಳಲ್ಲಿ ಯಾರೂ ಇವರಿಂದ ಬರಕತ್ ಆಶಿಸಲಿಲ್ಲ. ಸಹಾಬಾಗಳಿಗಿಂತ-ಲೂ ಶ್ರೇಷ್ಠ ಸ್ಥಾನದಲ್ಲಿರುವವರು ಈ ಸಮುದಾಯದಲ್ಲಿ ಇನ್ನಾರೂ ಇಲ್ಲ. ಆದರೂ ಅವರ ನಂತರ ಬಂದವರು ಪ್ರವಾದಿ(ﷺ) ಯವರ ಮೂಲಕ ಬರಕತ್ತನ್ನು ಆಶಿಸುವ ಅದೇ ವಿಧಾನದಲ್ಲಿ ಸಹಾಬಾಗಳ ಮೂಲಕವೂ ಬರ-ಕತ್ತನ್ನು ಆಶಿಸುತ್ತಿದ್ದರು ಎಂಬುದು ಸುಪರಿಚಿತವಾದ, ಸಹೀಹಾದ ಮಾರ್ಗದ ಮೂಲಕ ದೃಢೀಕರಣವಾಗಿಲ್ಲ. ಬದಲಾಗಿ ಅವರು ಮಾಡಿದ್ದೇನೆಂದರೆ ಸಹಾಬಾಗಳು ಪ್ರವಾದಿ(ﷺ) ಯವರನ್ನು ಅನುಸರಿಸಿ ನಿರ್ವಹಿಸಿದ

ಆ ಕರ್ಮಗಳು, ಮಾತುಗಳು ಮತ್ತು ನಡೆನುಡಿಗಳನ್ನು ಅನುಕರಿಸುವುದಕ್ಕೆ ತಮ್ಮನ್ನು ಸೀಮಿತಗೊಳಿಸಿದರು. ಆ ರೀತಿ ಬರಕತ್ ಆಶಿಸುವುದನ್ನು ವರ್ಜಿಸಬೇಕು ಎಂಬುದಕ್ಕೆ ಇದು ಅವರ ಒಮ್ಮತದ ತೀರ್ಮಾನವಾಗಿದೆ."

ಅದೇ ರೀತಿ ಹಸನ್(﵁) ಮತ್ತು ಹುಸೈನ್(﵁) ರ ಮೂಲಕ, ಅಥವಾ ಫಾತಿಮ(﵂) ರವರ ಮೂಲಕ ಅವರು ಬರಕತ್ತನ್ನು ಆಶಿಸಲಿಲ್ಲ. ಪ್ರವಾದಿ(ﷺ) ಯವರ ಸತ್ವದಲ್ಲಿದ್ದ ಬರಕತ್ ಅವರ ಸಂತಾನಕ್ಕೆ ವರ್ಗಾವಣೆಯಾಗುವುದಿಲ್ಲ ಎಂಬುದಕ್ಕೆ ಇದು ಪುರಾವೆಯಾಗಿದೆ. ವರ್ಗಾವಣೆಯಾಗುತ್ತದೆಂದು ವಾದಿಸುವವರು ಶಿಯಾಗಳು ಮತ್ತು ಅವರ ಅನುಯಾಯಿಗಳು ಮಾತ್ರ.

4. ಶಿರ್ಕಿನೆಡೆಗೆ ಕೊಂಡೊಯ್ಯುವ ದ್ವಾರಗಳನ್ನು ಮುಚ್ಚುವುದು ಇಸ್ಲಾಮೀ ಶರೀಅತ್ತಿನ ಒಂದು ನಿಯಮವಾಗಿದೆ. ಕುರ್‌ಆನ್ ಅನೇಕ ಸ್ಥಳಗಳಲ್ಲಿ ಇದನ್ನು ಪ್ರಸ್ತಾಪಿಸಿದೆ. ಸುನ್ನತ್ತಿನಲ್ಲೂ ಇದನ್ನು ಯಥೇಷ್ಟ ಕಾಣಬಹುದು. ಸಜ್ಜನರ

ಮೂಲಕ ಬರಕತ್ ಆಶಿಸುವುದಕ್ಕೆ ಶರೀಅತ್ ಅನುಮತಿ ನೀಡದಿರುವುದು ಬಹುಷಃ ಶಿರ್ಕಿನೆಡೆಗೆ ಒಯ್ಯುವ ದ್ವಾರ-ಗಳನ್ನು ಮುಚ್ಚುವ ಕಾರಣದಿಂದಾಗಿರಬಹುದು.

5. ಪ್ರವಾದಿ(ﷺ) ಯವರಲ್ಲದ ಬೇರೆ ವ್ಯಕ್ತಿಯ ಮೂಲಕ ಬರಕತ್ ಆಶಿಸುವುದು ಆ ವ್ಯಕ್ತಿಯನ್ನು ಫಿತ್ನದಲ್ಲಿ ಕೆಡುವುವ ಸಾಧ್ಯತೆಯಿದೆ. ಕಾರಣ ಇದರಿಂದ ಆತ ತನ್ನನ್ನು ತಾನೇ ಮಹಾ ವ್ಯಕ್ತಿಯೆಂದು ಭಾವಿಸಬಹುದು. ಆ ವ್ಯಕ್ತಿಯಲ್ಲಿ ಹೆಮ್ಮೆ, ಅಹಂಭಾವ, ತೋರಿಕೆ, ಆತ್ಮಪ್ರ-ಶಂಸೆ ಮೊದಲಾದ ನಿಷಿದ್ಧ ಕೃತ್ಯಗಳು ಉಂಟಾಗಬಹುದು.

[ಹಾದಿಹೀ ಮಫಾಹೀಮುನಾ ಎಂಬ ಗ್ರಂಥದಿಂದ]

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014

MOB: 9731593091 / 9945171612

Jamiyathe Ahle Hadees Mangalore